# ಸುದ್ದಿ ಸಂಚಯ

✷ ಕೊಲ್ಕತಾದ ಬಾರಾನಗರ ಮಠ, ಗುಜರಾತಿನ ಲಿಂಬ್ಡಿ, ಉತ್ತರಪ್ರದೇಶದ ಲಖ್ನೌ ಹಾಗೂ ಕರ್ನಾಟಕದ ಬೆಂಗಳೂರಿನಲ್ಲಿರುವ ಹಲಸೂರು ಕೇಂದ್ರಗಳು ಜುಲೈ–ಆಗಸ್ಟ್ ತಿಂಗಳುಗಳಲ್ಲಿ ೨೫೬ ರೋಗಿಗಳಿಗೆ ಕಣ್ಣು ತಪಾಸಣೆ ಮಾಡಿ ಶಸ್ತ್ರಚಿಕಿತ್ಸೆಯ ಸೇವೆಯನ್ನು ಸಲ್ಲಿಸಿವೆ.

✷ ಪಶ್ಚಿಮ ಬಂಗಾಳದ ಕೊಲ್ಕತಾ ನಗರದಲ್ಲಿರುವ ವಿಧಾನ ಸಭೆಯಲ್ಲಿ ಆಗಸ್ಟ್ ೩ರಂದು ಶ್ರೀಮಾತೆ ಶಾರದಾದೇವಿಯವರ ಭಾವಚಿತ್ರವನ್ನು ಸಂಸದೀಯ ವ್ಯವಹಾರಗಳ ಮಂತ್ರಿ ಶ್ರೀ ಪ್ರಬೋಧ್ ಚಂದ್ರ ಸಿನ್ಹಾ ಅವರು ಅನಾವರಣಗೊಳಿಸಿದರು. ಪುಷ್ಪಮಾಲೆಗಳಿಂದ ಸುಂದರವಾಗಿ ಅಲಂಕರಿಸಲ್ಪಟ್ಟಿದ್ದ ಶ್ರೀಮಾತೆಯ ಚಿತ್ರ ಆಕರ್ಷಕವಾಗಿತ್ತು. ಪ್ರಮುಖವಾದ ಮೊಗಸಾಲೆಯಲ್ಲೇ ಇದನ್ನು ಪ್ರದರ್ಶಿಸಿರುವ ಪಶ್ಚಿಮ ಬಂಗಾಳದ ಸರ್ಕಾರವು ಸಮತಾವಾದಿ ಸರ್ಕಾರವೆಂಬುದು ಗಮನಾರ್ಹ. ರಾಮಕೃಷ್ಣ ಸಂಘದ ಪ್ರಮುಖ ಕಾರ್ಯದರ್ಶಿಗಳು, ಹಿರಿಯ ಸಂನ್ಯಾಸಿಗಳು, ಮಂತ್ರಿಗಳು, ಆಡಳಿತ ವರ್ಗದ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

✷ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗಹನಾನಂದಜಿ ಮಹಾರಾಜರು ಬಂಗಾಳದ ಆಸನ್ಸೋಲ್ ನಗರದಲ್ಲಿರುವ ಕೇಂದ್ರದಲ್ಲಿ ಹೊಸದಾಗಿ ನಿರ್ಮಿತವಾಗಿರುವ ಸಾಧುನಿವಾಸ, ವಿದ್ಯಾರ್ಥಿನಿಲಯ, ಊಟದಮನೆ, ಗ್ರಂಥಾಲಯ ಹಾಗೂ ಸಭಾಂಗಣವನ್ನು ಆಗಸ್ಟ್ ೮ ಮತ್ತು ೯ರಂದು ಉದ್ಘಾಟಿಸಿದರು.

✷ ಮೇಘಾಲಯದ ಶಿಲ್ಲಾಂಗ್‌ನಲ್ಲಿರುವ ಕೇಂದ್ರದ ನೂತನ ಪಾಕಶಾಲೆ ಹಾಗೂ ಊಟದ ಮನೆಗಳನ್ನು ಪರಮಪೂಜ್ಯ ಸ್ವಾಮಿ ಗಹನಾನಂದಜಿ ಮಹಾರಾಜರು ಆಗಸ್ಟ್ ೨೪ರಂದು ಉದ್ಘಾಟಿಸಿದರು.

✷ ಝಾರ್‌ಖಂಡದಲ್ಲಿರುವ ದೇವಘರ್ ವಿದ್ಯಾಪೀಠ ಕೇಂದ್ರದ ಶಾಲೆಯ ಮಕ್ಕಳಿಗೆ ಈಜುಕೊಳ ಹಾಗೂ ವಿಶಾಲವಾದ ಊಟದ ಮನೆಯನ್ನು ನಿರ್ಮಿಸುವ ಸಲುವಾಗಿ ಆಗಸ್ಟ್ ೧೧ರಂದು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಆತ್ಮಸ್ಥಾನಂದಜಿ ಮಹಾರಾಜರು ಶಂಕುಸ್ಥಾಪನೆಯನ್ನು ನೆರವೇರಿಸಿದರು.

✷ ಆಂಧ್ರಪ್ರದೇಶದ ಕಡಪಾದಲ್ಲಿ ಪ್ರಾರಂಭವಾಗಿರುವ ರಾಮಕೃಷ್ಣ ಮಠ ಮತ್ತು ಮಿಷನ್ನಿನ ನೂತನ ಕೇಂದ್ರಕ್ಕೆ ಸ್ವಾಮಿ ಆತ್ಮವಿದಾನಂದಜಿಯವರು ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಈ ಕೇಂದ್ರವು ಈಗಾಗಲೇ ನಗರ ಪ್ರದೇಶದಿಂದ ಏಳು ಕಿ.ಮೀ. ದೂರದಲ್ಲಿ ಒಂದು ಹೊಸ ಜಾಗವನ್ನು ಸರ್ಕಾರದ ನೆರವಿನಿಂದ ಪಡೆದುಕೊಂಡಿದೆ. ಹತ್ತು ಎಕರೆ ವಿಸ್ತಾರವಾದ



ಕಡಪಾ ಕೇಂದ್ರದ ಸಾಧುನಿವಾಸದ ಶಂಕುಸ್ಥಾಪನೆಯನ್ನು ಸ್ವಾಮಿ ಸ್ಮರಣಾನಂದಜಿ ನೆರವೇರಿಸುತ್ತಿರುವುದು. ಎಡದಿಂದ, ಸ್ವಾಮಿ ಆತ್ಮವಿದಾನಂದಜಿ, ಸ್ವಾಮಿ ಗೌತಮಾನಂದಜಿ

ಈ ಪ್ರದೇಶವು ಬೆಟ್ಟದ ತಪ್ಪಲಿನಲ್ಲಿದ್ದು ಸುತ್ತಮುತ್ತಲೂ ಹೊಸ ಬಡಾವಣೆಗಳು ಪ್ರಾರಂಭವಾಗುತ್ತಿವೆ.

ಆಗಸ್ಟ್ ೨೦೦೫ರ ೨೬, ಶ್ರೀಕೃಷ್ಣಜನ್ಮಾಷ್ಟಮಿಯ ಪವಿತ್ರ ದಿನದಂದು ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಅವರು ಸಾಧುನಿವಾಸದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಚೆನ್ನೈ ಕೇಂದ್ರದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಹಾಗೂ ಇತರ ಹಿರಿಯ ಸಾಧುಗಳು, ಐ.ಎ.ಎಸ್. ಅಧಿಕಾರಿಗಳಾದ ಶ್ರೀ ಅಶೋಕ್ ಕುಮಾರ್, ಕಡಪಾದ ಸಂಸದರಾದ ಶ್ರೀ ವಿವೇಕಾನಂದ ರೆಡ್ಡಿ ಈ ಸಂದರ್ಭದಲ್ಲಿ ಹಾಜರಿದ್ದರು.

ಕಡಪಾ ಕೇಂದ್ರಕ್ಕೆ ವಿಶಿಷ್ಟವಾದ ಇತಿಹಾಸವಿದೆ. ೧೯೧೦ರಲ್ಲಿ ಶ್ರೀ ಖಾನ್ ಬಹಾದೂರ್ ಮಂಜುಮ್ಮೈಯ್ಯ ಎಂಬ ಸೂಫಿ ಮುಸ್ಲಿಂ ಶ್ರೀರಾಮಕೃಷ್ಣರಲ್ಲಿ ಅನುರಕ್ತನಾಗಿ ಒಂದು ಮನೆಯನ್ನು ಆಶ್ರಮ ಸ್ಥಾಪಿಸಲು ದೇಣಿಗೆಯಾಗಿ ನೀಡಿದರು. ಆ ಮನೆಯಲ್ಲಿ ಭಕ್ತರು ಕೇಂದ್ರವನ್ನು ನಡೆಸಿಕೊಂಡು ಬಂದರು. ಶ್ರೀರಾಮಕೃಷ್ಣರ ನೇರಶಿಷ್ಯರಲ್ಲಿ ಒಬ್ಬರಾದ ಪೂಜ್ಯ ಸ್ವಾಮಿ ಶಿವಾನಂದರೂ ಕೂಡ ಇಲ್ಲಿ ಕೆಲವು ದಿನ ವಾಸವಾಗಿದ್ದರು. ೨೦೦೪ರಲ್ಲಿ ಈ ಜಾಗವನ್ನು ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ನಿಗೆ ವರ್ಗಾವಣೆ ಮಾಡಲಾಯಿತು. ಇದೀಗ ಸರ್ಕಾರ ಹಾಗೂ ಭಕ್ತರ ಸಹಾಯದಿಂದ ಕಾರ್ಯವಿಸ್ತರಣೆ ನಡೆಯುತ್ತಿದ್ದು ಮೌಲ್ಯಶಿಕ್ಷಣ, ಧಾರ್ಮಿಕ ಸಾಮರಸ್ಯ ಹಾಗೂ ಆಧ್ಯಾತ್ಮಿಕ ವಿಚಾರಗಳ ಪ್ರಸಾರದಲ್ಲಿ ತೊಡಗಲು ನಿರ್ಧರಿಸಲಾಗಿದೆ.

✡